# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 151 |
| ಸದಸ್ಯರ ಹೆಸರು | ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 05.12.2023 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಲಾಗಿದೆಯೇ; ಕಲ್ಪಿಸಿದ್ದಲ್ಲಿ, ಮರಳು ಗಣಿಗಾರಿಕೆಗೆ ಸರ್ಕಾರ ರೂಪಿಸಿರುವ ನಿಯಮ ಹಾಗೂ ಮಾನದಂಡ ಗಳೇನು; | ಹೌದು.<br>• ಪ್ರಸ್ತುತ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರಂತೆ ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿಪಡಿಸಿದ ಸರ್ಕಾರಿ ಇಲಾಖೆ ಅಥವಾ ಸರ್ಕಾರಿ ಸ್ವಾಮ್ಯದ ನಿಗಮ ಅಥವಾ ಮಂಡಳಿಗಳಿಗೆ ಮರಳು ಗಣಿಗಾರಿಕೆ ನಡೆಸಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಅದರಂತೆ, ತಾಲ್ಲೂಕು ಮರಳು ಸಮಿತಿಯಿಂದ I, II ಮತ್ತು III ನೇ ಶ್ರೇಣಿಯ ಹಳ್ಳ ಪಾತ್ರಗಳಲ್ಲಿ ಮರಳು ತೆಗೆಯಲು ಗುರುತಿಸಿರುವ ಮರಳು ನಿಕ್ಷೇಪ ಪ್ರದೇಶಗಳಲ್ಲಿ ತಾಲ್ಲೂಕು ಮರಳು ಸಮಿತಿಯ ಸೂಕ್ತ ಶಿಫಾರಸ್ಸಿನೊಂದಿಗೆ ಜಿಲ್ಲಾ ಮರಳು ಸಮಿತಿಯು ಅಗತ್ಯವಿದ್ದಲ್ಲಿ ಸೂಕ್ತ ಮಾರ್ಪಾಡುಗಳೊಂದಿಗೆ ಗ್ರಾಮ ಪಂಚಾಯಿತಿಯಿಂದ ಮರಳು ತೆಗೆದು ಸ್ಥಳೀಯ ಕಾಮಗಾರಿಗಳಿಗೆ ಪೂರೈಸಲು ಅಧಿಸೂಚನೆ ಹೊರಡಿಸುತ್ತದೆ.<br>• ತರುವಾಯ ತಾಲ್ಲೂಕು ಮರಳು ಸಮಿತಿಯ ಅಧ್ಯಕ್ಷರು ಜಿಲ್ಲಾ ಮರಳು ಸಮಿತಿಯಿಂದ ಅಧಿಸೂಚನೆ ಹೊರಡಿಸಿರುವ ನಿಕ್ಷೇಪ ಪ್ರದೇಶಗಳಲ್ಲಿ ಮರಳು ತೆಗೆಯಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಕಾರ್ಯಾದೇಶ ನೀಡುತ್ತಾರೆ.<br>• ಗ್ರಾಹಕರು ಸರ್ಕಾರದಿಂದ ಪ್ರತಿ ಮೆಟ್ರಿಕ್ ಟನ್ ಮರಳಿಗೆ ನಿಗದಿಪಡಿಸಿರುವ ₹300/- ಗಳ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಪಾವತಿಸಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವಿತರಿಸುವ ವಿಶೇಷ ರಕ್ಷಣಾತ್ಮಕ ಪರವಾನಿಗೆಯೊಂದಿಗೆ ಎತ್ತಿನಗಾಡಿ, ಟ್ರ್ಯಾಕ್ಟರ್ / ಇತರ 03 ಟನ್ ಸಾಮರ್ಥ್ಯಕ್ಕಿಂತ ಕಡಿಮೆ ಇರುವ ವಾಹನಗಳಲ್ಲಿ ಮರಳನ್ನು ಸಾಗಾಣಿಕೆ ಮಾಡಿಕೊಳ್ಳಬಹುದಾಗಿರುತ್ತದೆ.<br>• ರಾಜ್ಯದಲ್ಲಿ ಸರ್ಕಾರ ಸ್ವಾಮ್ಯದ ಸಂಸ್ಥೆಗಳಾದ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಹಾಗೂ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ರವರಿಗೆ IV, V ಮತ್ತು ಉನ್ನತ- |

| | | |
|---|---|---|
| | | -ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ಹಾಗೂ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಪ್ರದೇಶಗಳಲ್ಲಿ ಹೂಳಿನೊಂದಿಗೆ ದೊರೆಯುವ ಮರಳನ್ನು ತೆಗೆದು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಜಿಲ್ಲಾ / ತಾಲ್ಲೂಕು ಮರಳು ಸಮಿತಿಯಿಂದ IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ಹಾಗೂ ಅಣೆಕಟ್ಟು / ಜಲಾಶಯ / ಬ್ಯಾರೇಜ್ ಪ್ರದೇಶಗಳಲ್ಲಿ ಹೂಳಿನೊಂದಿಗೆ ದೊರೆಯುವ ಮರಳು ಪ್ರದೇಶಗಳನ್ನು ಗುರುತಿಸಲಾಗುತ್ತದೆ. ನಂತರ ಸದರಿ ಪ್ರದೇಶಗಳನ್ನು ಜಿಲ್ಲಾ ಮರಳು ಸಮಿತಿ ಅನುಮೋದನೆಯೊಂದಿಗೆ ಸಂಬಂಧಪಟ್ಟ ಸರ್ಕಾರಿ ಸ್ವಾಮದ ಸಂಸ್ಥೆಗಳಿಗೆ ಮರಳು ಗಣಿಗಾರಿಕೆ/ ಹೂಳಿನೊಂದಿಗೆ ದೊರೆಯುವ ಮರಳು ತೆಗೆಯಲು ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>• IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ಅಧಿಸೂಚನೆ ಹೊರಡಿಸಿದ ಮರಳು ಬ್ಲಾಕುಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ಅನುಮೋದಿತ ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಸಲ್ಲಿಸಲು ಜಿಲ್ಲಾ ಮರಳು ಸಮಿತಿಯಿಂದ ಆಶಯ ಪತ್ರ ನೀಡಲಾಗುತ್ತದೆ.<br>• ಸಂಬಂಧಪಟ್ಟ ಸರ್ಕಾರಿ ಸಂಸ್ಥೆಗಳು ಅನುಮೋದಿತ ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಸಲ್ಲಿಸಿದ ನಂತರ ಮರಳು ಗಣಿಗಾರಿಕೆಗೆ ಜಿಲ್ಲಾ ಮರಳು ಸಮಿತಿಯಿಂದ 05 ವರ್ಷಗಳ ಅವಧಿ ಅಥವಾ ಮರಳಿನ ಪ್ರಮಾಣವು ಮುಕ್ತಾಯ ವಾಗುವ ಅವಧಿಯವರೆಗೆ ಅಥವಾ ಇವೆರಡರಲ್ಲಿ ಯಾವುದು ಮೊದಲೋ ಆ ಅವಧಿಗೆ ಕಾರ್ಯದೇಶ ನೀಡಲಾಗುತ್ತದೆ.<br>• De-siltation ಗೆ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳಲ್ಲಿ ಸಂಬಂಧಪಟ್ಟ ಸಂಸ್ಥೆಗಳಿಗೆ De-siltation ನಡೆಸಲು ಜಿಲ್ಲಾ ಮರಳು ಸಮಿತಿಯಿಂದ ಕಾರ್ಯಾದೇಶ ನೀಡಲಾಗುತ್ತದೆ.<br>• ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತು ಪಡಿಸಿದ (Non CRZ) IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿ ವ್ಯಾಪ್ತಿಯಲ್ಲಿ ಕರಾವಳಿ ಜಿಲ್ಲೆಗಳ ಸಾಂಪ್ರದಾಯಿಕ ಮರಳು ತೆಗೆಯುವ ವ್ಯಕ್ತಿ / ಸಮುದಾಯಗಳಿಗೆ ಟೆಂಡರ್-ಕಂ-ಇ-ಹರಾಜು ಮೂಲಕ 05 ವರ್ಷಗಳ ಅವಧಿಗೆ ಮರಳು ಗುತ್ತಿಗೆ ಗಳನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಸಂಬಂಧ ಮರಳು ಬ್ಲಾಕ್ ಗಳನ್ನು ಟೆಂಡರ್-ಕಂ-ಹರಾಜು ಮೂಲಕ ವಿಲೇಪಡಿಸಲು ಸರ್ಕಾರವು ದಿನಾಂಕ 14.12.2022 ರಂದು ಮಾರ್ಗಸೂಚಿಗಳು ಹಾಗೂ ಟೆಂಡರ್ ಡಾಕ್ಯುಮೆಂಟ್ ನ್ನು ಹೊರಡಿಸಿದ್ದು, ಪ್ರತಿಯನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರ ನಿಯಮ 31-Z ರಂತೆ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. |

. . . 3

| | | |
|---|---|---|
| | | • ಸದರಿ ನಿಯಮದಂತೆ ಪಟ್ಟಾ ಜಮೀನಿನ ಮಾಲೀಕರು ಅಥವಾ ಪಟ್ಟಾ ಜಮೀನಿನ ಮಾಲೀಕರಿಂದ ಒಪ್ಪಿಗೆ ಪ್ರಮಾಣ ಪತ್ರ ಅಥವಾ GPA ಪತ್ರ ಸಲ್ಲಿಸಿದವರಿಗೆ ಮರಳು ಗಣಿಗಾರಿಕೆಗೆ ಗರಿಷ್ಟ 05 ವರ್ಷಗಳ ಅವಧಿಗೆ ಲೈಸನ್ಸ್ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಲೈಸನ್ಸ್ ನೀಡುವ ಸಂಬಂಧ ಸರ್ಕಾರವು ದಿನಾಂಕ:15.02.2022 ರಂದು ಮಾರ್ಗಸೂಚಿಗಳನ್ನು ಹೊರಡಿಸಿದ್ದು ಪ್ರತಿಯನ್ನು **ಅನುಬಂಧ-02** ರಲ್ಲಿ ನೀಡಲಾಗಿದೆ.<br>• ಪ್ರಸ್ತುತ, ಸರ್ಕಾರವು ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ನ್ನು ಜಾರಿಗೆ ತಂದಿದ್ದು, ಸದರಿ ತಿದ್ದುಪಡಿ ನಿಯಮಗಳಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮರಳು ಗಣಿಗಾರಿಕೆಯೊಂದಿಗೆ IV, V ಮತ್ತು ಉನ್ನತ ಶ್ರೇಣಿಯ ಹಳ್ಳ/ನದಿ ಪಾತ್ರಗಳಲ್ಲಿರುವ ಮರಳು ಬ್ಲಾಕ್ ಗಳನ್ನು ಸಾರ್ವಜನಿಕ ಟೆಂಡರ್ ಕಂ-ಹರಾಜು ಮೂಲಕ ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಆ) | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಸಾರ್ವಜನಿಕರಿಗೆ ಮರಳು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮ ಗಳೇನು; ಸರ್ಕಾರ ದಿಂದ ಮರಳು ಪೂರೈಸಲು ಗುರುತಿಸಿರುವ ಸ್ಥಳಗಳು ಯಾವುವು; ಮಾನದಂಡಗಳಾವುವು ಹಾಗೂ ಸರ್ಕಾರ ಪ್ರತಿ ಟನ್ ಮರಳಿಗೆ ನಿಗದಿಪಡಿಸಿರುವ ದರವೆಷ್ಟು; | • ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲಾ ವ್ಯಾಪ್ತಿಗಳಲ್ಲಿ ನೈಸರ್ಗಿಕ ಮರಳು ಸಂಗ್ರಹಣೆ ಯಾಗುವಂತಹ ನದಿಪಾತ್ರಗಳಿರುವುದಿಲ್ಲ. ಆದುದರಿಂದ, ಸದರಿ ಜಿಲ್ಲೆಗಳಲ್ಲಿ ಯಾವುದೇ ಮರಳು ಬ್ಲಾಕ್ ಗಳನ್ನು ಗುರುತಿಸಿರುವುದಿಲ್ಲ.<br>• ಮುಂದುವರೆದು, ಸದರಿ ಜಿಲ್ಲಾ ವ್ಯಾಪ್ತಿಗಳಲ್ಲಿ 144 ಎಂ-ಸ್ಯಾಂಡ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಎಂ-ಸ್ಯಾಂಡ್ ಘಟಕಗಳಿಂದ, ನೆರೆ ಜಿಲ್ಲೆಗಳಿಂದ ಹಾಗೂ ನೆರೆ ರಾಜ್ಯ ತಮಿಳುನಾಡಿನಿಂದ ಉತ್ಪಾದಿತ ಮರಳು ಪೂರೈಕೆಯಾಗುತ್ತಿದೆ.<br>• ಮರಳು ಬ್ಲಾಕ್ ಗಳನ್ನು ಗುರುತಿಸುವ ಹಾಗೂ ವಿಲೇವಾರಿ ಮಾಡುವ ಕುರಿತು ಮಾನದಂಡಗಳನ್ನು ಕಂಡಿಕೆ (ಅ) ರಲ್ಲಿ ಉತ್ತರಿಸಲಾಗಿದೆ.<br>• ಹೊಸ ಮರಳು ನೀತಿ, 2020 ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರಂತೆ, ಗ್ರಾಮ ಪಂಚಾಯಿತಿ ವತಿಯಿಂದ I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಮರಳು ತೆಗೆದು ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ₹ 300/- ಗಳನ್ನು ನಿಗದಿಪಡಿಸಲಾಗಿರುತ್ತದೆ.<br>• ಹಟ್ಟಿ ಚಿನ್ನದ ಗಣಿ ಕಂಪನಿ ನಿ., ಮತ್ತು ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿ.,ಗಳಿಂದ IV, V ಮತ್ತು ಉನ್ನತ ಶ್ರೇಣಿಯ ಹಳ್ಳ / ನದಿಗಳಲ್ಲಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆ ಯಿಂದ ಮತ್ತು ಅಣೆಕಟ್ಟು, ಜಲಾಶಯ ಮತ್ತು ಬ್ಯಾರೇಜ್- |

. . . 4

<table>
<tr><td></td><td></td><td>-ಪ್ರದೇಶಗಳಲ್ಲಿ ಹೂಳಿನೊಂದಿಗೆ ದೊರೆಯುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ₹ 700/-ಗಳ ಮಾರಾಟ ದರವನ್ನು ನಿಗದಿಪಡಿಸಲಾಗಿರುತ್ತದೆ.</td></tr>
<tr><td>ಇ)</td><td>ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಎಷ್ಟು ಟನ್ ಮರಳು ಪೂರೈಕೆಗೆ ಬೇಡಿಕೆ ಇತ್ತು; ಎಷ್ಟು ಟನ್ ಮಾರಾಟ ಮಾಡಲಾಗಿದೆ; ಬೇಡಿಕೆಯಂತೆ ಪೂರ್ಣವಾಗಿ ಮರಳು ಪೂರೈಸಲಾಗಿದೆಯೇ? (ವಿವರ ನೀಡುವುದು)</td><td>

• ಕಳೆದ 03 ವರ್ಷಗಳಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ವಾರ್ಷಿಕ ಅಂದಾಜು 34.08 ಮೆಟ್ರಿಕ್ ಟನ್ ಮರಳಿನ ಬೇಡಿಕೆ ಇದ್ದು, ಈ ಪೈಕಿ 14.55 ಮೆಟ್ರಿಕ್ ಟನ್ ಎಂ-ಸ್ಯಾಂಡ್ ಸದರಿ ಜಿಲ್ಲೆಗಳಿಂದ ಪೂರೈಕೆಯಾಗಿದ್ದು, ಜಿಲ್ಲಾವಾರು ಬೇಡಿಕೆ ಮತ್ತು ಪೂರೈಕೆ ವಿವರಗಳು ಈ ಕೆಳಕಂಡಂತಿರುತ್ತವೆ.

<table>
<tr><th>ಜಿಲ್ಲೆ</th><th>ವರ್ಷ</th><th>ಮರಳಿನ ಬೇಡಿಕೆ (MMT)</th><th>ಮರಳಿನ ಪೂರೈಕೆ (MMT)</th></tr>
<tr><td rowspan="3">ಬೆಂಗಳೂರು ಗ್ರಾಮಾಂತರ</td><td>2020-21</td><td>0.89</td><td>1.31</td></tr>
<tr><td>2021-22</td><td>0.93</td><td>1.34</td></tr>
<tr><td>2022-23</td><td>0.98</td><td>1.58</td></tr>
<tr><td rowspan="3">ಬೆಂಗಳೂರು ನಗರ</td><td>2020-21</td><td>8.55</td><td>2.28</td></tr>
<tr><td>2021-22</td><td>8.98</td><td>2.37</td></tr>
<tr><td>2022-23</td><td>9.43</td><td>2.40</td></tr>
<tr><td rowspan="3">ಕೋಲಾರ</td><td>2020-21</td><td>1.37</td><td>1.12</td></tr>
<tr><td>2021-22</td><td>1.44</td><td>1.13</td></tr>
<tr><td>2022-23</td><td>1.51</td><td>1.02</td></tr>
<tr><td colspan="2">ಒಟ್ಟು</td><td>34.08</td><td>14.55</td></tr>
</table>

• ಅಲ್ಲದೇ ಬೆಂಗಳೂರು ನಗರ ಜಿಲ್ಲೆಗೆ ಬೇರೆ ಜಿಲ್ಲೆಗಳಿಂದ ನದಿ ಮರಳು, ನೆರೆ ಜಿಲ್ಲೆಗಳಿಂದ ಹಾಗೂ ನೆರೆ ರಾಜ್ಯ ತಮಿಳುನಾಡಿನಿಂದ ಉತ್ಪಾದಿತ ಮರಳು ಸರಬರಾಜು ಆಗುತ್ತಿದ್ದು, ಬೇಡಿಕೆ ತಕ್ಕಂತೆ ಮರಳು ಪೂರೈಕೆಯಾಗಿರುತ್ತದೆ.
</td></tr>
</table>

ಸಂಖ್ಯೆ ಸಿಐ -ಎಂಎಂಎನ್/239/2023

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-1



## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಹೊಸ ಮರಳು ನೀತಿ, 2020 ರನ್ವಯ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ಹೊರತುಪಡಿಸಿದ ಪ್ರದೇಶದ (Non-CRZ) ವ್ಯಾಪ್ತಿಯ IV, V ಮತ್ತು ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್ ಗಳನ್ನು ಟೆಂಡರ್-ಕಂ-ಹರಾಜು ಮೂಲಕ ವಿಲೇಪಡಿಸಲು ಮಾರ್ಗಸೂಚಿಗಳನ್ನು ಮತ್ತು ಟೆಂಡರ್ ಡಾಕ್ಯುಮೆಂಟ್ ನ್ನು ಪ್ರಕಟಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 344 ಎಂಎಂಎನ್ 2019, ದಿನಾಂಕ 05.05.2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 344 ಎಂಎಂಎನ್ 2019 (ಭಾಗ-7), ದಿನಾಂಕ 01.12.2021.

*****

<u>ಪ್ರಸ್ತಾವನೆ</u>:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಅಧಿಸೂಚನೆಯಲ್ಲಿ, ಕರ್ನಾಟಕ ಮರಳು ನೀತಿ, 2020ನ್ನು ಹಾಗೂ ಅದರ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಯನ್ನು ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಅಧಿಸೂಚನೆಯಲ್ಲಿ, ಕರ್ನಾಟಕ ಮರಳು ನೀತಿ, 2020 ರನ್ವಯ ರಾಜ್ಯದ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ಹೊರತುಪಡಿಸಿದ ಪ್ರದೇಶದ (Non-CRZ) ವ್ಯಾಪ್ತಿಯ IV, V ಮತ್ತು ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್ ಗಳನ್ನು ಟೆಂಡರ್-ಕಂ-ಹರಾಜು ಮೂಲಕ ವಿಲೇಪಡಿಸಲು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-ZB (1) ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಅಂತೆಯೇ, ರಾಜ್ಯದ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ಹೊರತುಪಡಿಸಿದ ಪ್ರದೇಶದ (Non-CRZ) ವ್ಯಾಪ್ತಿಯ IV, V ಮತ್ತು ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್ ಗಳನ್ನು ಟೆಂಡರ್-ಕಂ-ಹರಾಜು ಮೂಲಕ ವಿಲೇಪಡಿಸಲು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-ZB (2) ರಂತೆ ಸರ್ಕಾರವು ಮಾರ್ಗಸೂಚಿಗಳು ಮತ್ತು ಟೆಂಡರ್ ದಸ್ತಾವೇಜನ್ನು ಪ್ರಕಟಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

### <u>ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/189/2022, ಬೆಂಗಳೂರು, ದಿನಾಂಕ 14.12.2022.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-ZB (1) ರಂತೆ ರಾಜ್ಯದ ಕರಾವಳಿ ಜಿಲ್ಲೆಗಳ ಕರಾವಳಿ ನಿಯಂತ್ರಣ ಹೊರತುಪಡಿಸಿದ ಪ್ರದೇಶದ (Non-CRZ) ವ್ಯಾಪ್ತಿಯ IV, V ಮತ್ತು ಉನ್ನತ ಶ್ರೇಣಿಯ ಹಳ್ಳ / ನದಿ ಪಾತ್ರಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್ ಗಳನ್ನು ಈ ಕೆಳಕಂಡ ಮಾರ್ಗಸೂಚಿಗಳು ಮತ್ತು ಟೆಂಡರ್ ದಸ್ತಾವೇಜಿನಂತೆ ಟೆಂಡರ್-ಕಂ-ಹರಾಜು ಮೂಲಕ ವಿಲೇಪಡಿಸಲು ಆದೇಶಿಸಿದೆ.

## ಮಾರ್ಗಸೂಚಿಗಳು

**ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ (Non CRZ) IV, V ಹಾಗೂ ಉನ್ನತ ಶ್ರೇಣಿಯ ಹಳ್ಳ / ನದಿಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳು ಬ್ಲಾಕ್ ಗಳನ್ನು ಟೆಂಡರ್-ಕಂ-ಹರಾಜು ಮೂಲಕ ಗಣಿ ಗುತ್ತಿಗೆಗೆ ಮಂಜೂರಾತಿ ನೀಡುವ ಸಂಬಂಧ ಮಾರ್ಗಸೂಚಿಗಳು.**

1. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021 ರ ನಿಯಮ 31-U ರ ಉಪನಿಯಮ (1) ಮತ್ತು (2) ರಂತೆ, IV, V ಹಾಗೂ ಉನ್ನತ ಶ್ರೇಣಿಯ ಹಳ್ಳ / ನದಿಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪ ಪ್ರದೇಶಗಳನ್ನು ತಾಲ್ಲೂಕು ಮರಳು ಸಮಿತಿಯ ಸದಸ್ಯರನ್ನೊಳಗೊಂಡ ಜಂಟಿ ಸ್ಥಳ ಪರಿಶೀಲನಾ ತಂಡವು ಗುರುತಿಸುವುದು. ಹೀಗೆ ಗುರುತಿಸಿದ ಮರಳು ನಿಕ್ಷೇಪ ಪ್ರದೇಶದಲ್ಲಿ ಮರಳಿನ ಪ್ರಮಾಣವನ್ನು ಅಂದಾಜಿಸಿ, ಸದರಿ ಪ್ರದೇಶದ ಗಡಿಗಳನ್ನು ಅಕ್ಷಾಂಶ-ರೇಖಾಂಶ ದೊಂದಿಗೆ ದಾಖಲಿಸಿ, ನಕ್ಷೆ ತಯಾರಿಸಿ ಸ್ಪಷ್ಟ ಶಿಫಾರಸ್ಸಿನ ವರದಿಯೊಂದಿಗೆ ಟೆಂಡರ್-ಕಂ-ಹರಾಜು ಮೂಲಕ ಮರಳು ಬ್ಲಾಕ್ ಗಳನ್ನು ವಿಲೇಪಡಿಸಲು ಜಿಲ್ಲಾ ಮರಳು ಸಮಿತಿಗೆ ಪ್ರಸ್ತಾವನೆ ಸಲ್ಲಿಸುವುದು.

2. ತಾಲ್ಲೂಕು ಮರಳು ಸಮಿತಿಯ ಸದಸ್ಯರನ್ನೊಳಗೊಂಡ ಜಂಟಿ ಸ್ಥಳ ಪರಿಶೀಲನಾ ತಂಡವು ಸಲ್ಲಿಸುವ ಪ್ರಸ್ತಾವನೆಯನ್ನು ಜಿಲ್ಲಾ ಮರಳು ಸಮಿತಿಯು ಪರಿಶೀಲಿಸಿ, ಅವಶ್ಯವಿದ್ದಲ್ಲಿ ಸೂಕ್ತ ಮಾರ್ಪಾಡುಗಳೊಂದಿಗೆ ಟೆಂಡರ್-ಕಂ-ಹರಾಜು ಮೂಲಕ ಮರಳು ಬ್ಲಾಕ್ ಗಳನ್ನು ವಿಲೇಪಡಿಸಲು ಅಧಿಸೂಚನೆ ಹೊರಡಿಸುವುದು.

3. ಜಿಲ್ಲಾ ಮರಳು ಸಮಿತಿಯು ಹೊರಡಿಸುವ ಅಧಿಸೂಚನೆಯನ್ನು ಅತೀ ಹೆಚ್ಚು ಪ್ರಸಾರವುಳ್ಳ ಕನಿಷ್ಟ 02 ದಿನಪತ್ರಿಕೆ (ಒಂದು ರಾಜ್ಯ ಹಾಗೂ ಒಂದು ಸ್ಥಳೀಯ ದಿನಪತ್ರಿಕೆ) ಗಳಲ್ಲಿ ಟೆಂಡರ್ ಗಳನ್ನು ಸ್ವೀಕರಿಸಲು ದಿನಾಂಕವನ್ನು ನಿಗದಿಪಡಿಸಿ ಜಾಹೀರಾತು ನೀಡತಕ್ಕದ್ದು. ಸದರಿ ಜಾಹೀರಾತನ್ನು ಟೆಂಡರ್ ಗಳನ್ನು ಸ್ವೀಕರಿಸಲು ನಿಗದಿಪಡಿಸುವ ಕೊನೆಯ ದಿನಾಂಕದ ಕನಿಷ್ಟ 15 ದಿನಗಳ ಮುಂಚೆ ಪ್ರಕಟಿಸತಕ್ಕದ್ದು.

4. ಹೀಗೆ ಅಧಿಸೂಚನೆ ಹೊರಡಿಸಿದ ಟೆಂಡರ್ ಕಂ ಹರಾಜು ಮರಳು ಬ್ಲಾಕ್‌ಗಳಿಗೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ಆಗಿರುತ್ತಾರೆ. ಅಂತೆಯೇ ಟೆಂಡರ್ ಡಾಕ್ಯುಮೆಂಟ್ ನ ಕ್ರಮ ಸಂಖ್ಯೆ (7) ಮತ್ತು (8) ರ ಅಂಗೀಕಾರ ಪ್ರಾಧಿಕಾರ ಹಾಗೂ ಸದರಿ ಯಶಸ್ವಿ ಬಿಡ್ಡುದಾರರನ್ನು ಘೋಷಿಸಿ, ಅನುಮೋದಿಸುವ ಪ್ರಾಧಿಕಾರ ಅಧ್ಯಕ್ಷರು, ಜಿಲ್ಲಾ ಮರಳು ಸಮಿತಿ ಆಗಿರುತ್ತಾರೆ.

5. ಟೆಂಡರ್-ಕಂ-ಹರಾಜು ಮೂಲಕ ಮರಳು ಗಣಿಗುತ್ತಿಗೆ ಮಂಜೂರಾತಿ ನೀಡುವ ಸಂಬಂಧ ಟೆಂಡರ್ / ಹರಾಜು ಪ್ರಕ್ರಿಯೆ ಕೈಗೊಳ್ಳಲು ಸರ್ಕಾರದಿಂದ ಒದಗಿಸಲಾಗುವ ಮಾದರಿ ಟೆಂಡರ್ ದಸ್ತಾವೇಜು (Tender Document) ನಂತೆ ಕ್ರಮ ಕೈಗೊಳ್ಳತಕ್ಕದ್ದು.

6. ಮರಳು ಬ್ಲಾಕ್ ಗಳ ಹರಾಜು ಪ್ರಕ್ರಿಯೆಯನ್ನು ಎಲ್ಲಿದೆಯೋ ಹಾಗೆ ಮತ್ತು ಹೇಗಿದೆಯೋ ಹಾಗೆ (as-is-where is basis) ಎಂಬ ಸಿದ್ಧಾಂತದಡಿ ಕೈಗೊಳ್ಳಲಾಗುವುದು.

7. ಬಿಡ್ಡುದಾರರು ಬಿಡ್ ಗಳನ್ನು ಸಲ್ಲಿಸುವ ಪೂರ್ವದಲ್ಲಿ ಅಧಿಸೂಚಿತ ಮರಳು ಬ್ಲಾಕ್ ಪ್ರದೇಶಗಳನ್ನು ಪರಿಶೀಲಿಸಿ, ಸದರಿ ಮರಳು ಬ್ಲಾಕ್ ನಲ್ಲಿ ಗಣಿಗಾರಿಕೆ ಚಟುವಟಿಕೆ ನಡೆಸಲು ಕಾರ್ಯಸಾಧುವಿರುವ ಬಗ್ಗೆ ಸ್ವತಃ ಖಚಿತಪಡಿಸಿಕೊಂಡು ಟೆಂಡರ್-ಕಂ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದು. ತದನಂತರ ವ್ಯಕ್ತಪಡಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

8.
   a. ಹರಾಜಿನಲ್ಲಿ ಪಾಲ್ಗೊಳ್ಳುವ ಬಿಡ್ದುದಾರರುಗಳಿಗೆ ಬಿಡ್ದು ದಸ್ತಾವೇಜು (Bid Document), ಅಧಿಸೂಚಿತ ನಕ್ಷೆ ಮತ್ತು ಇನ್ನಿತರ ಸಂಬಂಧಪಟ್ಟ ಅವಶ್ಯಕ ದಸ್ತಾವೇಜುಗಳನ್ನು ಜಿಲ್ಲಾ ಮರಳು ಸಮಿತಿಯಿಂದ ಒದಗಿಸತಕ್ಕದ್ದು.
   b. ಬಿಡ್ದುದಾರರುಗಳಿಗೆ ಬಿಡ್ದು ದಸ್ತಾವೇಜು, ಅಧಿಸೂಚಿತ ನಕ್ಷೆ ಹಾಗೂ ಇನ್ನಿತರ ಸಂಬಂಧಪಟ್ಟ ದಸ್ತಾವೇಜುಗಳನ್ನು ಅಧ್ಯಯನ ನಡೆಸಲು ನಿಗದಿತ ಅವಧಿಯನ್ನು ಅಧಿಸೂಚನೆಯಲ್ಲಿ ನಿಗದಿಪಡಿಸುವುದು. ಈ ಅವಧಿಯು ಮುಕ್ತಾಯವಾದ ನಂತರವೇ ಹರಾಜು ಪ್ರಕ್ರಿಯೆಯನ್ನು ಪ್ರಾರಂಭಿಸುವುದು.
   c. ಬಿಡ್ದುದಾರರು ಹಿಂದಿರುಗಿಸಲಾಗದ ಅರ್ಜಿ ಶುಲ್ಕ, ಇ-ಆಡಳಿತ ಇಲಾಖೆಯ ಪ್ರಕ್ರಿಯೆ ಶುಲ್ಕ ಮತ್ತು EMD ಮೊತ್ತ ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಟೆಂಡರ್ ಡಾಕ್ಯುಮೆಂಟ್ ನ ಕ್ರಮ ಸಂಖ್ಯೆ (5) ರಲ್ಲಿ ನಿಗದಿಪಡಿಸಿರುವಂತೆ ಪಾವತಿಸುವುದು.
   d. ಬಿಡ್ದುದಾರರು ಟೆಂಡರ್ ಡಾಕ್ಯುಮೆಂಟ್ ನ ಕ್ರಮ ಸಂಖ್ಯೆ (5), (7) ಮತ್ತು (8) ರಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಶುಲ್ಕ ಹಾಗೂ ಅವಶ್ಯಕ ಡಾಕ್ಯುಮೆಂಟ್ ಗಳೊಂದಿಗೆ ಬಿಡ್ದುಗಳನ್ನು ಸಲ್ಲಿಸಬೇಕು. ಒಂದು ವೇಳೆ ಸಲ್ಲಿಸದೆ ಇದ್ದ ಪಕ್ಷದಲ್ಲಿ ಸದರಿ ಅರ್ಜಿಯನ್ನು ತಿರಸ್ಕರಿಸುವುದು ಹಾಗೂ ಮಾಹಿತಿಯನ್ನು ಬಿಡ್ದುದಾರರಿಗೆ ಇ-ಪೋರ್ಟಲ್ ಮೂಲಕ ನೀಡುವುದು.

9. ಮರಳು ಬ್ಲಾಕ್ ಗಳಲ್ಲಿ ಗಣಿ ಗುತ್ತಿಗೆ ಮಂಜೂರಾತಿ ನೀಡುವ ಸಂಬಂಧ ಅರ್ಜಿದಾರನಿಗೆ ಇರಬೇಕಾದ ಅರ್ಹತೆಗಳನ್ನು (Eligibility Criteria), ಮೂಲ ಬೆಲೆ (Base Price) ವಿವರ, ಹರಾಜು ಪ್ರಕ್ರಿಯೆಯ (Process Auction) ವಿಧಾನ, ಟೆಂಡರ್ ಅರ್ಜಿಗಳನ್ನು ಹಿಂಪಡೆಯುವಿಕೆ ಮತ್ತು ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಒದಗಿಸಲಾಗಿದೆ. ಅದರಂತೆ, ಹರಾಜು ಪ್ರಕ್ರಿಯೆ ಕೈಗೊಳ್ಳುವುದು.

10. ಅತೀ ಹೆಚ್ಚಿನ ಅಂತಿಮ ದರವನ್ನು ನಮೂದು ಮಾಡುವಂತಹ ಅರ್ಹ ಬಿಡ್ದುದಾರರನ್ನು ಹರಾಜು ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್ದುದಾರರನ್ನು ಜಿಲ್ಲಾ ಮರಳು ಸಮಿತಿಯಿಂದ ಘೋಷಿಸಿ, ಅನುಮೋದನೆ ನೀಡತಕ್ಕದ್ದು.

11. ಹರಾಜು ಪ್ರಕ್ರಿಯೆಯಲ್ಲಿ ಮರಳು ಗಣಿಗಾರಿಕೆಯ ಗುತ್ತಿಗೆ ಮಂಜೂರಾತಿಗಾಗಿ ಆಯ್ಕೆಯಾಗುವಂತಹ ಅರ್ಜಿದಾರ (Successful Bidder) ನನ್ನು ಹೊರತುಪಡಿಸಿ, ಇತರ ಎಲ್ಲಾ ಅರ್ಜಿಗಳು ತಿರಸ್ಕೃತಗೊಂಡಿವೆ ಎಂದು ಪರಿಭಾವಿಸತಕ್ಕದ್ದು ಮತ್ತು ಅಂತಹ ಅರ್ಜಿದಾರರಿಗೆ Earnest Money Deposit ಮರು ಪಾವತಿಸುವುದು.

12. ಯಶಸ್ವಿ ಬಿಡ್ದುದಾರನಿಗೆ, ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು ಅಥವಾ ಹಿರಿಯ ಭೂವಿಜ್ಞಾನಿಯವರು ಶಾಸನಬದ್ಧ ದಾಖಲೆಗಳಾದ ಅನುಮೋದಿತ ಕ್ವಾರಿ ಪ್ಲಾನ್, ಪರಿಸರ ಅನುಮತಿ ಪತ್ರ ಹಾಗೂ ಅವಶ್ಯಕವೆಂದು ಕಂಡು ಬರುವ ಇತರೆ ದಾಖಲೆಗಳನ್ನು ಸಲ್ಲಿಸಲು ಆಶಯ ಪತ್ರ (Provisional Acceptance Letter) ವನ್ನು ನೀಡುವುದು.

13. ಬಿಡ್ದುದಾರರು ಆಶಯ ಪತ್ರ ನೀಡಿದ ದಿನಾಂಕದಿಂದ ಆರು ತಿಂಗಳೊಳಗೆ ಪರಿಸರ ಅನುಮತಿ ಪತ್ರ ಹಾಗೂ ಇತರೆ ಸಂಬಂಧಪಟ್ಟ ಶಾಸನಬದ್ಧ ದಾಖಲೆಗಳನ್ನು ಸಲ್ಲಿಸುವುದು. ಒಂದುವೇಳೆ ಯಶಸ್ವಿ ಬಿಡ್ದುದಾರರು ಸೂಕ್ತ ಕಾರಣಗಳೊಂದಿಗೆ ಅವಧಿ ವಿಸ್ತರಣೆ ಕೋರಿ ಮನವಿ ಸಲ್ಲಿಸಿದಲ್ಲಿ, ಜಿಲ್ಲಾ ಮರಳು ಸಮಿತಿಯು ಇದನ್ನು ಪರಿಶೀಲಿಸಿ, ಮುಂದಿನ ಗರಿಷ್ಠ 03 ತಿಂಗಳುಗಳವರೆಗೆ ಆಶಯ ಪತ್ರದ ಅವಧಿಯನ್ನು ವಿಸ್ತರಿಸಬಹುದು (ಈ ಅವಧಿಯು ಆಶಯ ಪತ್ರ ನೀಡಿದ ದಿನಾಂಕದಿಂದ 09 ತಿಂಗಳು ಮೀರತಕ್ಕದ್ದಲ್ಲ).

14. ಒಂದುವೇಳೆ ಯಶಸ್ವಿ ಬಿಡ್ದುದಾರನು ಕ್ರಮ ಸಂಖ್ಯೆ (13) ರಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಪರಿಸರ ಅನುಮತಿ ಪತ್ರ ಹಾಗೂ ಇತರೆ ಶಾನಸಬದ್ಧ ದಾಖಲೆಗಳನ್ನು

ಸಲ್ಲಿಸದೆ ಇದ್ದ ಪಕ್ಷದಲ್ಲಿ ಆತನು ಇರಿಸಿದ EMD ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಅರ್ಜಿಯನ್ನು ಜಿಲ್ಲಾ ಮರಳು ಸಮಿತಿಯು ತಿರಸ್ಕರಿಸತಕ್ಕದ್ದು.

15. ಯಶಸ್ವಿ ಬಿಡ್ಡುದಾರನು ನಿಗದಿತ ಅವಧಿಯೊಳಗೆ ಪರಿಸರ ಅನುಮತಿ ಪತ್ರ ಹಾಗೂ ಇತರ ಶಾಸನಬದ್ಧ ದಾಖಲೆಗಳನ್ನು ಸಲ್ಲಿಸಿದಲ್ಲಿ, ಯಶಸ್ವಿ ಬಿಡ್ಡುದಾರರಿಗೆ ಪರಿಸರ ಅನುಮತಿ ಪತ್ರದಲ್ಲಿ ನಿಗದಿಪಡಿಸಿರುವ ವಾರ್ಷಿಕ ಮರಳು ಉತ್ಪಾದನೆ ಪ್ರಮಾಣದ ಶೇ. 25 ರಷ್ಟು ಮುಂಗಡ ರಾಜಧನ ಮತ್ತು ಹೆಚ್ಚುವರಿ ನಿಯತಕಾಲಿಕ ಮೊತ್ತ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 36(5) ರಂತೆ ಕಾರ್ಯಕ್ಷಮತಾ ಭದ್ರತಾ ಠೇವಣಿ ಮೊತ್ತದ ಬ್ಯಾಂಕ್ ಗ್ಯಾರಂಟಿ ಹಾಗೂ ಇತರ ಅನ್ವಯಿಕ ಶುಲ್ಕಗಳನ್ನು ಗುತ್ತಿಗೆ ಮಂಜೂರಾತಿ ಪೂರ್ವದಲ್ಲಿ ಪಾವತಿಸುವ ಷರತ್ತಿಗೊಳಪಟ್ಟು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 16(1) ರಂತೆ ಅಧಿಸೂಚನೆ ಹೊರಡಿಸುವುದು.

16. ಬಿಡ್ಡುದಾರನು ಅಧಿಸೂಚನೆ ಹೊರಡಿಸಿದ ನಿಗದಿತ ಅವಧಿಯೊಳಗೆ ಕ್ರಮ ಸಂಖ್ಯೆ (15) ರಂತೆ, ಸಂಬಂಧಪಟ್ಟ ಎಲ್ಲಾ ಶುಲ್ಕಗಳನ್ನು ಪಾವತಿಸಿದಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 18 ರಂತೆ ನಿಗದಿತ ನಮೂನೆ ಫಾರಂ-E ರಲ್ಲಿ ಹೆಚ್ಚುವರಿ ಷರತ್ತು ಇದ್ದಲ್ಲಿ ವಿಧಿಸಿ, ಮರಳು ಗಣಿ ಗುತ್ತಿಗೆ ಕರಾರು ಅಮಲ್ನಾರಿ (lease deed) ಮಾಡುವುದು ಹಾಗೂ ಇದನ್ನು ಸಂಬಂಧಪಟ್ಟ ಉಪ ನೋಂದಣಾಧಿಕಾರಿ ಯವರಲ್ಲಿ ಮೂರು ತಿಂಗಳೊಳಗೆ ನೋಂದಣಿ ಮಾಡಿಸಿ ಸಂಬಂಧಿಸಿದ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಚೇರಿಗೆ ಸಲ್ಲಿಸುವುದು.

17. ಒಂದು ವೇಳೆ ಕ್ರಮ ಸಂಖ್ಯೆ (16)ರಂತೆ ಗುತ್ತಿಗೆದಾರರು ನಿಗದಿತ ಅವಧಿಯೊಳಗೆ ಗುತ್ತಿಗೆ ಕರಾರು ನೋಂದಣಿ ಮಾಡಿಸದೇ ಇದ್ದಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 18 ರಂತೆ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರು ಕ್ರಮವಹಿಸತಕ್ಕದ್ದು.

18. ಯಶಸ್ವಿ ಬಿಡ್ಡುದಾರನು ಗಣಿ ಗುತ್ತಿಗೆ ಹರಾಜಿನಲ್ಲಿ ಭಾಗವಹಿಸಿ ಪಾವತಿಸಿದ್ದ EMD ಮೊತ್ತವನ್ನು ಭದ್ರತಾ ಠೇವಣಿಯಾಗಿ ಪರಿಗಣಿಸಿ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 38 ರಂತೆ ಮರು ಪಾವತಿಸುವುದು.

19. ಪ್ರತಿ ಆರ್ಥಿಕ ವರ್ಷದ ಮೊದಲನೇ ಮಾಹೆಯಲ್ಲಿ, ಪರಿಸರ ಅನುಮತಿ ಪತ್ರದಲ್ಲಿ ವಾರ್ಷಿಕವಾಗಿ ನಿಗದಿಪಡಿಸಿರುವ ಒಟ್ಟು ಉತ್ಪಾದನೆಯ ಶೇ. 25 ರಷ್ಟು ಪ್ರಮಾಣಕ್ಕೆ ರಾಜಧನ ಮತ್ತು ಹೆಚ್ಚುವರಿ ನಿಯತಕಾಲಿಕ ಮೊತ್ತವನ್ನು ಯಶಸ್ವಿ ಗುತ್ತಿಗೆದಾರನು ಮುಂಗಡವಾಗಿ ಪಾವತಿಸುವುದು. ಸದರಿ ಮೊತ್ತವನ್ನು ಸದರಿ ಸಾಲಿನ ಕಡೆಯ ತ್ರೈಮಾಸಿಕ ಅವಧಿಯಲ್ಲಿ ಗುತ್ತಿಗೆದಾರನು ರವಾನೆ ಪರವಾನಿಗೆ ಬಯಸಿದಲ್ಲಿ, ಕಳೆದ ಮೂರು ತ್ರೈಮಾಸಿಕ ಅವಧಿಯಲ್ಲಿ ಮರಳು ಗಣಿಗಾರಿಕೆ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರನಿಂದ ಯಾವುದೇ ನ್ಯೂನತೆಗಳಿಲ್ಲದಿದ್ದಲ್ಲಿ, ಸದರಿ ಮೊತ್ತಕ್ಕೆ ಗುತ್ತಿಗೆದಾರನಿಗೆ ರವಾನೆ ಪರವಾನಗಿ ನೀಡಲು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿರುತ್ತದೆ.

20. ಒಂದು ವೇಳೆ ಗುತ್ತಿಗೆದಾರನು ಕ್ರಮ ಸಂಖ್ಯೆ (19) ರಲ್ಲಿ ತಿಳಿಸಿರುವಂತೆ, ಮುಂಗಡವಾಗಿ ರಾಜಧನ ಹಾಗೂ ಹೆಚ್ಚುವರಿ ನಿಯತಕಾಲಿಕ ಮೊತ್ತವನ್ನು ಪಾವತಿಸದಿದ್ದಲ್ಲಿ ಸದರಿಯವರಿಗೆ ಮರಳು ರವಾನೆ ಪರವಾನಿಗೆಯನ್ನು ನೀಡುವಂತಿಲ್ಲ.

21. ಮರಳು ಗುತ್ತಿಗೆದಾರರು ಉತ್ಪಾದಿಸಿ, ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್ ಮರಳಿಗೆ ರಾಜಧನ / ಹೆಚ್ಚುವರಿ ನಿಯತಕಾಲಿಕ ಮೊತ್ತ, ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ ಹಾಗೂ ಇತರೆ ಎಲ್ಲಾ ಅನ್ವಯಿಕ ಶುಲ್ಕಗಳನ್ನು ಪಾವತಿಸಿ, ನಿಯಮಾನುಸಾರ ಖನಿಜ ರವಾನೆ ಪರವಾನಿಗೆ ಪಡೆದು ಸಾಗಾಣಿಕೆ ಮಾಡತಕ್ಕದ್ದು.

22. ಗುತ್ತಿಗೆದಾರನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ಅಧ್ಯಾಯ II-A ಮತ್ತು ಅಧ್ಯಾಯ IV-B ರಲ್ಲಿರುವ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ

ಬದಲಾವಣೆ ಮಂತ್ರಾಲಯವು ಹೊರಡಿಸಿರುವ Sustainable Sand Mining Guidelines, 2016 ಮತ್ತು enforcement and monitoring guidelines, 2020 ರಂತೆ ಮರಳು ಗಣಿಗಾರಿಕೆ ನಿರ್ವಹಿಸುವುದು.

23. ಗುತ್ತಿಗೆ ಅವಧಿಯನ್ನು 05 ವರ್ಷಗಳ ಅವಧಿಗೆ ಮರಳು ಗಣಿಗಾರಿಕೆಗೆ ಮಂಜೂರಾತಿ ನೀಡುವುದು.

24. ಗುತ್ತಿಗೆದಾರನು ಅನುಮೋದಿತ ಅಂತಿಮ ಗಣಿ ಮುಚ್ಚುವ ಯೋಜನೆಯೊಂದಿಗೆ (approved final quarry closure plan) ಗುತ್ತಿಗೆ ಪ್ರದೇಶವನ್ನು ಗುತ್ತಿಗೆ ಅವಧಿಯ ಪೂರ್ವದಲ್ಲಿಯೇ ಅಧ್ಯರ್ಪಣೆ ಮಾಡಲು ಉದ್ದೇಶಿಸಿ ಅರ್ಜಿ ಸಲ್ಲಿಸಿದಲ್ಲಿ, ಆತನು ಅರ್ಜಿ ಸಲ್ಲಿಸಿದ ತೊಂಭತ್ತು ದಿನಗಳೊಳಗೆ ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರು ನಿಯಮಾನುಸಾರ ಪರಿಶೀಲಿಸಿ, ಪ್ರಕ್ರಿಯೆ ನಿಯಮಾನುಸಾರ ಇರುವುದು ಕಂಡು ಬಂದಲ್ಲಿ, ಜಿಲ್ಲಾ ಮರಳು ಸಮಿತಿಯ ಅನುಮೋದನೆಯೊಂದಿಗೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 19 ರಂತೆ ಅಧ್ಯಾರ್ಪಣೆಯನ್ನು ಅಂಗೀಕರಿಸುವುದು.

25. ಸಾಂಪ್ರದಾಯಿಕವಾಗಿ ಮರಳು ತೆಗೆಯುವ ವ್ಯಕ್ತಿಗೆ ಮಾತ್ರ ಅವಕಾಶವಿದ್ದು, ಯಾವುದೇ ಸಂಘ-ಸಂಸ್ಥೆ / ಪಾಲುದಾರಿಕೆಯ ಹೆಸರಿನಲ್ಲಿ ಅರ್ಜಿಯನ್ನು ಸಲ್ಲಿಸುವಂತಿಲ್ಲ.

26. ಮರಳು ಗಣಿ ಗುತ್ತಿಗೆಯ ವರ್ಗಾವಣೆಯನ್ನು ನಿಷೇಧಿಸಲಾಗಿರುತ್ತದೆ.

27. ಯಾಂತ್ರಿಕ ದೋಣಿಗಳು ಮತ್ತು ಡ್ರೆಡ್ಜಿಂಗ್ ಯಂತ್ರಗಳ ಬಳಕೆಯನ್ನು ನಿಷೇಧಿಸಿದೆ.

**************

## ಮಾದರಿ ಟೆಂಡರ್ ಡಾಕ್ಯೂಮೆಂಟ್

**Government of Karnataka**

**Model Tender Document**

[See Rule 31-ZB(2)]

**District Sand Committee, ___________ District**

**O/o Deputy Commissioner ....................................**

**Tender-Cum-Auction Document for Disposal of Sand blocks in IV, V and Higher order streams in Non CRZ Area of Coastal Districts**

**Introduction:**

Sand is used as fine aggregate in mortars and concrete. River sand is product of natural weathering of rocks over a period of millions of years. It is mined from the river beds. River sand has become scarce commodity now. In recent years rapid urbanization and development has lead increase in demand of river sand as a source of construction material.

The Government of Karnataka amended the KMMCR-1994 on 01.12.2021 where in provision has been made for disposal of sand blocks in IV, V & Higher order streams of Non-CRZ areas of coastal districts of appropriate size as specified under Schedule II A of KMMCR: 1994 will be

granted through e-auction among the Traditional Sand Extraction Communities of the Coastal Districts for extraction of sand.

The ____________ District Sand Committee here by invites e-applications in response to the notification No: __________ dated: ____________ from the interested persons of Traditional Sand Extraction Communities of the districts for grant of Sand quarry leases (IV, V & Higher order streams) for extraction of sand for the areas specified in the tender notification.

The interested Traditional Sand Extraction Community persons may download the e-Tender document from the e-portal Government of Karnataka web site: https://eproc.karnataka.gov.in and participate in the Tender cum Auction process. The interested parties may register in the e-procurement postal well in advance. For any support please contact:

1. ........................
2. ........................

This Tender Document is neither an agreement nor an offer by the District Sand Committee to the prospective Bidders or any other person. The purpose of this Tender Document is to provide interested parties with information that may be useful to them in making their bids pursuant to this Tender Document. This Tender Document includes statements which reflect various assumptions and assessments arrived at by the District Sand Committee in relation to the sand block. Such assumptions, assessments and statements do not purport to contain all the information that each Bidder may require. This Tender Document may not be appropriate for all persons, and it is not possible for the District Sand Committee, its members or advisors to consider the investment objectives, financial situation and particular needs of each party who reads or uses this Tender Document. The assumptions, assessments, statements and information contained in the Tender Document may not be complete, accurate, adequate or correct. Each Bidder should, therefore, conduct its own investigations and analysis and should check the accuracy, adequacy, correctness, reliability and completeness of the assumptions, assessments, statements and information contained in this Tender Document and obtain independent advice from appropriate sources.

The District Sand Committee may in its absolute discretion, but without being under any obligation to do so, update, amend or supplement the information, assessment or assumptions contained in this Tender Document.

The issue of this Tender Document does not imply that the District Sand Committee is bound to select a successful bidder for the Sand block and the District Sand Committee reserves the right to reject all or any of the Bidders or bids without assigning any reason whatsoever.

1. **DETAILS OF AREA:** (as specified in Annexure page-No.01 to ----) of the tender document.

2. **ELIGIBILITY CRITERIA:**

(1) In non-CRZ areas of coastal districts i.e., Uttara Kannada, Dakshina Kannada and Udupi, sand blocks shall be allotted through Tender-cum-Auction amongst the traditional sand - extracting community persons and same were identified subject to the following conditions, namely:-

(a) A person shall be a resident of the concerned district for not less than one year and to that effect residential certificate shall be obtained from jurisdictional Tahasildar.

(b) The person shall furnish the document as proof of having engaged in extraction of sand in coastal area through manual methods for at least one year;

(c) The person shall own a stock yard near the river bank or shall have an agreement with the owner of the land to that effect and submit the documents for the same.

(d) If Bidder is an Income Tax payer, last financial year Income Tax returns shall be submitted.

(e) Bidder should submit Aadhar card/ Voter ID etc.., as address proof.

3. **INSPECTION OF THE SAND BLOCKS:**

a) Bidders should inspect the Sand Blocks and satisfy themselves regarding prevailing operational conditions and availability of sand before submission of bids. Objections raised subsequently will not be entertained.

b) All bids shall be construed and presumed on as-is-where is basis.

c) For sand blocks inspections; the bidders are requested to contact the concerned district Deputy Director / Senior Geologist, Department of Mines & Geology.

d) The bid document shall be provided along with the notified sketch and other-relevant documents if any.

e) The bidders shall be provided a fixed period from -------- to --------- date to study the bid documents and reports. Bidding process shall commence only on expiry of the said period.

## 4. DOWNLOADING OF e-TENDER APPLICATION FORMS:

The bidder shall download Application i.e Form-I(Anneuxure-1) from e-governance platform https://eproc.karnataka.gov.in and also the instructions thereon to submit their-tender with relevant documents as attachments.

## 5. APPLICATION PROCESSING FEE AND EARNEST MONEY DEPOSIT (EMD):

a) Non-refundable Application fee of Rs. 10,000/- shall be paid in the e-governance platform.
b) The tenderer shall also pay processing fee as fixed by the e-governance department in their portal.
c) The EMD amount will be equal to the 25% royalty of the estimated sand quantity specified in the Tender Document.
d) EMD amount shall be paid in the e-governance portal through any of the following e-payment modes i.e. credit / debit card NEFT/RTGS.
e) EMD amount of non-successful bidder will be refunded within three months after completion of auction process. EMD shall not carry any interest.
f) If the Successful Bidder fails to execute the lease deed within the prescribed time under rule 18 of the Karnataka Minor Mineral Concession Rules, 1994 EMD will be forfeited.

## 5-A. PRE-BID MEETING:

A pre-bid meeting will be held on __________ date __________ time at the Office of ______________. Any clarifications required by the bidder will be discussed and suitable corrigendum if required will be issued in e-portal. Any decision taken by the District Sand Committee is final.

## 6. SUBMISSION OF THE BIDS / UPLOADING OF DOCUMENTS :

The bidder shall upload duly filled prescribed e-Tender application in Form-I (Annexure-01) along with the documents as mentioned in clause 7. Separate application form and enclosures should be uploaded for each sand block.

## 7. TECHNICAL BID:

7.1 The Tenderer shall submit the following documents.

i. e-Tender application in Form –1 (Annexure-01).

ii. Payment of application, Processing fees and EMD as mentioned in clause 5.

iii. No Due Certificate from the Deputy Director / Senior Geologist of the concerned District where the block is put for auction.

iv. Residential certificate as mentioned in clause 2(1)(a).

v. Proof of having engaged in extraction of sand in coastal area through manual methods for at least one year.

vi. Document regarding Stockyard as mentioned in clause 2(1)(c).

vii. If Bidder is an Income Tax payer, last financial year Income Tax returns shall be submitted.

viii. Bidder should submit Aadhar card/ Voter ID etc.., as address proof.

ix. An affidavit stating that the Tenderer has filed;

1. He/She abide by the terms and conditions of the Tender cum auction.
2. He/She is not a minor or an undischarged insolvent or unsound mind.
3. He/She is not holding an office of profit under the State Government or Central Government concerned.
4. Has not been convicted of any offence involving moral turpitude.
5. He/She has no dues payable to the Government.
6. He/She does not belong to the category for whom the block is so reserved.
7. Bid once offered shall not be withdrawn till the grant of sand quarry lease in respect of such blocks.

7.2 The Tenderer who have not uploaded any one of the above documents and submission of insufficient documents will not be considered.

7.3 The Tenderer shall specifically mention the name of the sand block for which EMD has been remitted.

7.4 Financial bid shall not be uploaded or mentioned in the Technical Bid, if done so, Such application shall be rejected.

7.5 Bidder shall produce the original documents if sought by the tender inviting authority.

7.6 In case the Tenderer submits Tender for more than one sand block, the complete documents listed under technical bid and EMD shall be submitted separately for each block.

**8. Financial Bid:**

a) Base Price is 50% of royalty (Sand). Hence, tenderer has to offer / bid above base prise If more than one bid is quoted by the same applicant, the highest quoted bid will be valid.

b) Financial bid in e-tender shall be made in Form-2 (Annuxure-2) with percentage of initial price offer payable equal or greater than the Base Price payable per tonne both in words and figures. Incomplete or corrections, modifications in the initial price offer shall be deemed as defective and shall be rejected.

**9. WITHDRAWAL OF TENDER:**

a) The tenderer shall not be allowed to withdraw his offer or bid.

b) The District Sand Committee reserves the right to withdraw the tender at any time without assigning any reason whatsoever.

**10. PROCESS OF e-AUCTION:**

Tender cum-Auction shall be online and shall have the following two rounds of auction namely;

(a) In the first round of auction, the bidder shall submit a technical bid and financial bid as specified in clause 7 and 8 of this Tender Document.

(b) Only those bidders who are found to be eligible in accordance with the terms and conditions of eligibility specified in the bid document and whose initial price offer is equal to or greater than the base price shall be considered for evaluating the technically qualified bidders for second round of auction.

(c) The technically qualified bidders shall be ranked on the basis of descending initial price offer submitted by them and the technically qualified bidders holding the First Fifty percent of the ranks (rounded off to next integer, fraction if any) or top five bidders, whichever is higher shall be qualified for second round of auction.

(d) If the total number of technically qualified bidders are less than three, the auction process shall be annulled, it shall not be applicable for the auction process after third and subsequent call. After the annulment, EMD of the Bidders will be returned.

(e) If the number of technically qualified bidders are between three and five, then all the technically qualified bidders shall be considered as qualified bidders for the second round of auction.

However, in the event of identical initial price offer-being submitted by two or more technically qualified bidders, all such bidders shall be assigned the same rank and aforementioned fifty percent shall stand enhanced to fifty percent plus the number of persons with same rank.

(f) The highest price offer amongst the technically qualified bidders shall be the floor price for the second round of auction.

(g) In the second round of auction, the technically qualified bidders may offer their final price offer which shall be greater than the Floor Price.

(h) The final price offer shall be increased in multiples of minimum 2% of Floor Price till the conclusion of the auction.

(i) The auction process shall be annulled if none of the qualified bidders offers the final price offer in the online electronic auction platform. The EMD of the bidder who quoted highest initial price offer will be forfeited.

(j) The qualified bidder who offers the highest final price offer shall be declared as the successful bidder in the auction process.

(k) If, for any reason the auction is not held on the day fixed, same will be held at the same time on the next working day for which no further notification will be issued. If not on next day, the same shall be published in the web site/e-portal.

## 11. Selection Of Successful Bidder and Grant of Quarry Lease:

(1) The qualified bidder who offers the highest final price offer shall be declared as the successful bidder by the Deputy Director/ Senior Geologist upon approval of the e-auction from the District Sand Committee.

(2) After approval from the District Sand Committee the letter of intent will be issued to the successful bidder by the concerned Deputy Director or Senior Geologist.

(3) Successful Bidder shall submit all the statutory clearances within 6 months from the date of issuance of Letter of Intent. District Sand Committee may extend the period for another 3 months time by recording suitable reasons (Not exceeding 09 months from the date of Letter of Intent).

(4) If the condition specified above were not complied by the successful bidder, the EMD shall be forfeited and Letter of Intent shall stand cancelled.

(5) On Compliance of all above conditions, Deputy Director / Senior Geologist shall issue grant notification as per rule 16 of the Karnataka Minor Mineral Concession Rule, 1994 Subject to the payment 25% of royalty and additional periodic payment in advance for the estimated sand quantity per annum specified in Environmental Clearance and other applicable fees to the Department of Mines and Geology before execution of lease.

(6) After all payments made by the successful bidder as specified in clause 11(5) The Deputy Director or Senior Geologist shall execute the quarry lease in favour of successful bidder as per rule 18 of the Karnataka Minor Mineral Concession Rule, 1994.

(7) Executed Quarry Lease shall be registered with concerned Sub Registrar Office within 3 months by the lessee.

(8) Lessee should pay the 25% of royalty and additional periodic payment of the estimated sand quantity specified in Environmental Clearance in advance during the first month of the subsequent financial years. If there is no shortcoming/violations during last three quarters and lessee wishes to obtain the mineral despatch permits to transport sand in the last quarter then the mineral despatch permits can issued to that amount.

(9) If lessee failed to pay the 25% of royalty and additional periodic payment of the estimated sand quantity specified in Environmental Clearance in advance the Mineral Despatch permit shall not be issued.

## 12. PERIOD OF QUARRY LEASE:

Period of quarry lease shall be 5 years from the date of execution of lease deed.

## 13. Minimum Assured Production:

The lessee shall produce and dispatch minimum fifty percent of the permitted annual production quantity as mentioned in the Environment Clearance. If lessee fails to achieve the same, he shall be liable to pay Royalty and Additional periodic payment for the difference quantity.

If lessee fails to achieve minimum production and dispatch requirement for reasons beyond his control, the Deputy Director / Senior Geologist, on an application made by the lessee and after giving opportunity of hearing, may waive-off the requirement of the minimum production and dispatch for such period as it may deem fit with the approval of District sand committee.

**14. Transfer of Lease:**

Transfer of sand quarry lease or sub lease is prohibited.

**15. PAYMENT TERMS:**

Lessee shall be bound to pay the Royalty, Survey and Demarcation fees, Additional Periodic Payment, DMF, Deed book fees, Special Security Permit Paper fees, processing fees, quarry plan approval fees etc.,

**16. STATUTORY OBLIGATIONS:**

i. The lessee at his own cost should get the quarrying plan prepared and approved shall also obtain necessary statutory requirements like Environmental Clearance.
ii. The lessee shall obtain approved quarry plan and Environment Clearance from the Authorities concerned as per Act and Rules made their under.
iii. Lessee shall comply with provisions of;
   a. KMMCR, 1994
   b. MM(D&R) Act, 1957
   c. Environment Protection Act, 1986
   d. All labour laws including Contract (Labour Regulation and Obligation) Act, 1971 and Rules.
   e. Workmen's Compensation Act and Rules
   f. Minimum Wages Act and Rules.
   g. Guidelines issued in Government Order No. CI-MMN/ 189/2022, Bengaluru, Dated 14.12.2022.

**17. FORCE MAJEURE CLAUSE:**

In case, the contract is to be cancelled / terminated for any reason arising out of the law governing the Contract Labour Regulation and Abolition Act or any other law or for any reasons like natural disaster / calamities, war, hostility, military operation

of any character, civil-commotions, sabotage, acts of Government embargoes, the Tenderer shall not be entitled for any compensation.

**18. ARBITRATION:**

If any dispute arises between the parties, it shall be settled through mutual discussion good faith. If not settled, the matter may be referred for Arbitration. The Commissioner / Director, Department of Mines and Geology shall be the sole arbitrator for the purpose and his/her decision shall be final and binding on both the parties.

**19. ASSIGNMENT:**

The contract is not assignable on either side.

**20. POWERS OF DISTRICT SAND COMMITTEE:**

The District Sand Committee reserves the right to reject all or any of the tender / bids without assigning any reason thereof or split up the tender as deems fit.

The District Sand Committee also reserves the right to cancel the bid or lease even after acceptance of bid or during performance of the contract.

**Annexure-1**

**Form-1**

**GOVERNMENT OF KARNATAKA**

**(See rule-31-ZB)**

**Notification No: ............................ dated:..........................**

**To**
**Chairman,**
**District Sand Committee,**
**-----------------District.**

**APPLICATION FOR SAND QAURRY LEASE**

| SL. NO. | ITEM | DETAILS |
|---|---|---|
| 1. | Name and full address of the Bidder | |
| | Telephone No: | |
| | Mobile No. | |
| | E-Mail ID. | |
| 2. | Date of Birth:<br>Age as on the last date of tender. | |
| 3. | Nature of Business of the Applicant<br>a) Mining/Sand Removing/Fishing, etc | |
| 4. | Details of the applied area;<br>District:<br>Taluk:<br>Village:<br>Sy. No:<br>Block No:<br>Extent of Block: | |
| 5. | Payment details:<br>i) Application fee<br>Amount paid:<br>ii) Processing fee (e-governance)<br>Amount paid: | |

| | | |
|---|---|---|
| | iii) EMD<br>Amount paid:<br>Payment mode: Credit / Debit /RTGS/NEFT | |
| 6. | Bankers reference, if any | |
| 7. | Particulars of mineral wise quarry leases already held by the Applicant. | |
| 8. | Clearance Certificate with respect to royalty, dead rent, surface rent and any other dues towards department. | |
| 9. | Does the bidder submits documents as per clause (7) of tender document (Yes/No. | |
| 10. | Does the applicant hold office of profit Yes/No. | |
| 11. | Does the applicant has convicted of any offence, involving moral turpitude / illegal mining activity. | |
| 12. | Any other relevant information | |

**DECLARATION**

**I/We hereby declare that:-**

a. The particulars uploaded are factual & correct and we are agreeable to furnish any other information / details as may be required by District Sand Committee, ..................... District.

b. I/We agree & declare that I/We are fully familiar with the terms & conditions of the tender cum auction process as notified by the District Sand Committee .................... District and agree to abide by the terms and conditions issued by Commissioner / Director, Department of Mines and Geology/District Sand Committee .................. District.

**Date:** **[Signature of the Bidder]**

**Place:** **[Name with Full address]**

**Annexure-2**

## Form-II

## Financial Tender Bid Form

District .......................... Taluk ................... Village .................. Survey No. ................. Extent .......................... Block No..............

| **Sl. No. as in the Notification** | **Name of the Sand Block** | **Initial Price offer (in %) (Per MT)** | |
|---|---|---|---|
| 1 | 2 | 3-A (In numerical) | 3-B (In words) |
| | | | |

**Note :**

1) The tender offer format shall be submitted for each sand block separately and should be submitted in this format only. If any deviation in the tender offer, such bidders will be summarily rejected.
2) The tender offer / Bid shall be quoted in % basis only and shall be equal or greater than 50% of royalty.

**Signature of the Tenderer**

Date :
Place :

**Annexure-3**

## Bid Letter

**To,**
**The Chairman,**
**District Sand Committee,**
**............................ district.**

Dear Sir,

Tender Notification Ref: Dated:

Having examined the tender document including all Annexures the receipt of which is hereby duly acknowledge, I, the undersigned, offer to participate in the tender in conformity with the said tender in accordance with the schedule of rates indicated in the commercial offer and made part of this offer.

If offer is accepted, I undertake to work as specified in the tender document and enter into agreement within two weeks from the date of issue or order.

If offer is accepted, I undertake to abide by all the acts, rules and regulations as prescribed and changed from time to time during the tender period. I also undertake that I will not resort to illegality in the work and any illegality found I have liable for any action from the District Sand Committee. I also undertake that I will pay the royalty and Additional periodic payment / premium as quoted from time to time. Default in payment if any lease may be terminated.

I also undertake that I will be abide that I will not cause any degradation in the environment.

I am aware that it is the discretion of the District Sand Committee, ............................ district for accepting or rejecting the tender. I accept all the Instructions, Terms and Conditions and Nature of Work in the tender and abide the decisions taken by District Sand Committee and arbitrator.

Dated ............................

Signature ........................

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**Annexure-4**

## List of Documents to be submitted

**The submission of Technical Offer for this tender is strictly in the following order.**

1. Tender processing fee to be payable at E-Proc., portal.
2. Bid letter. This should be as per Annexure-3
3. Application in the format of Annexure-1.
4. Documents in proof of the Eligibility Criteria as per clause 7 of tender document.
5. Copies of Income tax returns, if any.
6. Amount paid documents.
7. An Affidavit for the contents as specified in clause 7.1(ix) of the tender document.

**Note:** Failure to comply with the above instruction is liable for rejection.

Dated ..............................

Signature ........................

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸುಮ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-471**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59.

ಅನುಬಂಧ-2



**PR-45**

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಬಗ್ಗೆ ಮಾರ್ಗಸೂಚಿಗಳು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 344 ಎಂಎಂಎನ್ 2019, ದಿನಾಂಕ 05.05.2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 344 ಎಂಎಂಎನ್ 2019 (ಭಾಗ-7), ದಿನಾಂಕ 01.12.2021.
3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ DMG-24012/2021.

********

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಅಧಿಸೂಚನೆಯಲ್ಲಿ, ಕರ್ನಾಟಕ ಮರಳು ನೀತಿ, 2020ನ್ನು ಹಾಗೂ ಅದರ ಅನುಷ್ಠಾನಕ್ಕಾಗಿ ವಿವರವಾದ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಅಧಿಸೂಚನೆಯಲ್ಲಿ, ಹೊಸ ಮರಳು ನೀತಿ, 2020 ರನ್ವಯ ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡಲು ಅವಕಾಶ ಕಲ್ಪಿಸಿದ್ದು, ಈ ಕುರಿತು ನಿಯಮಗಳನ್ನು ರೂಪಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಏಕ ಕಡತದ ಪ್ರಸ್ತಾವನೆಯಲ್ಲಿ, ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ತಿದ್ದುಪಡಿ ನಿಯಮಗಳಂತೆ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಬಗ್ಗೆ ಕರಡು ಮಾರ್ಗಸೂಚಿಗಳನ್ನು ತಯಾರಿಸಿ, ಸಲ್ಲಿಸಲಾಗಿರುತ್ತದೆ.

ರಾಜ್ಯದ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z ರಂತೆ ಮಾರ್ಗಸೂಚಿಗಳನ್ನು ಹೊರಡಿಸುವುದು ಸೂಕ್ತವೆಂದು ಭಾವಿಸಿ, ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಐ 344 ಎಂಎಂಎನ್ 2019 (ಭಾಗ-16),</u>**
**<u>ಬೆಂಗಳೂರು, ದಿನಾಂಕ 15.02.2022.</u>**

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಪಟ್ಟಾ ಜಮೀನುಗಳಲ್ಲಿ ದೊರೆಯುವ ಮರಳನ್ನು ತೆಗೆಯಲು ಪಟ್ಟಾದಾರರು ಅರ್ಜಿ ಸಲ್ಲಿಸಿದಲ್ಲಿ, ಜಿಲ್ಲಾ ಮರಳು ಸಮಿತಿಯು ಸಮರ್ಥನೀಯ ಕಾರಣಗಳೊಂದಿಗೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z ರಂತೆ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಕುರಿತು ಪ್ರಸ್ತಾವನೆ ಸಲ್ಲಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೊರಡಿಸಿದೆ.

**ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸುವ ಕುರಿತುಮಾರ್ಗಸೂಚಿಗಳು:**

1. ಈ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ದಾಖಲೆಗಳೊಂದಿಗೆ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸಲು ಪರವಾನಗಿ ಕೋರಿ ಸ್ವೀಕೃತವಾದ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಪಡೆಯತಕ್ಕದ್ದು.
2. ಈ ಮಾರ್ಗಸೂಚಿಯು ಕರಾವಳಿ ನಿಯಂತ್ರಣ ವಲಯದ (CRZ) ಮಿತಿಯೊಳಗಿನ ಪಟ್ಟಾ ಜಮೀನುಗಳಿಗೆ ಅನ್ವಯಿಸುವುದಿಲ್ಲ.
3. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗಾಗಿ ಅನುಮತಿಸಲು ಕರ್ನಾಟಕ ಉಪ ಖನಿಜ ರಿಯಾಯ್ತಿತಿ ನಿಯಮಗಳು, 1994 ರ ಷೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವಂತೆ ಕನಿಷ್ಠ ವಿಸ್ತೀರ್ಣ ಇರತಕ್ಕದ್ದು.
4. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವ ಮುನ್ನ ನದಿ ದಂಡೆಯಿಂದ 50 ಮೀಟರ್ ಅಥವಾ ನದಿ ಪಾತ್ರದ ಅಗಲದ ಶೇ.10 ರಷ್ಟು ಅಥವಾ ಇವುಗಳಲ್ಲಿ ಯಾವುದರ ಅಂತರ ಹೆಚ್ಚು ಆ ಅಂತರವನ್ನು ಸುರಕ್ಷಿತ ಅಂತರವಾಗಿ ಕಾಯ್ದುಕೊಳ್ಳತಕ್ಕದ್ದು.
5. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಹೊರಡಿಸಿರುವ Enforce and Monitoring Guidelines of Sand Mining, 2020 ರಂತೆ ನದಿ ಪಾತ್ರದಲ್ಲಿ ಮರಳು ಗಣಿಗಾರಿಕೆಗೆ ಸಾಧ್ಯತೆ ಇರುವ 5 ಕಿ.ಮೀ. ಪರಿಮಿತಿ ವ್ಯಾಪ್ತಿಯ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ನೀಡುವಂತಿಲ್ಲ. ಒಂದು ವೇಳೆ ಸದರಿ ಪಟ್ಟಾ ಜಮೀನಿನಲ್ಲಿ ಹೂಳು / ಮರಳು ಮರುಪೂರ್ಣವಾಗುವ ಸಾಧ್ಯತೆ ಇದ್ದಂತಹ ಸಂದರ್ಭದಲ್ಲಿ ನದಿ ಪಾತ್ರದಿಂದ 5 ಕಿ. ಮೀ ವ್ಯಾಪ್ತಿಯೊಳಗೆ ಬರುವ ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ ಅನುಮತಿ ನೀಡಬಹುದಾಗಿದ್ದು, ಈ ಸಂಬಂಧ ಪೂರ್ವ ಕಾರ್ಯಸಾಧ್ಯತೆ ವರದಿ (Pre Feasibility Report) ಯನ್ನು Recognized Qualified Persons (RQP) ಗಳಿಂದ ಪಡೆದು, ಜಿಲ್ಲಾ ಮರಳು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರವೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

6. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅಪೇಕ್ಷಿಸಿದ ಪ್ರದೇಶವು ಸಾರ್ವಜನಿಕ ರಚನೆಗಳಿಂದ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 6(2) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಅಂತರವಿರತಕ್ಕದ್ದು.

7. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(5) ರಡಿ ಸಂಬಂಧಪಟ್ಟ ತಹಶೀಲ್ದಾರ್, ಕಂದಾಯ ಇಲಾಖೆ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ ಇವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು, ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನಮೂನೆ-ಎಸ್ ರಲ್ಲಿ ತಾಂತ್ರಿಕ ವರದಿ ಪಡೆಯುವುದು.

8. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ತಾಂತ್ರಿಕ ಅಧಿಕಾರಿಗಳು ಅರ್ಜಿತ ಪಟ್ಟಾ ಜಮೀನುಗಳಲ್ಲಿನ ಮರಳಿನ ಮಾದರಿಗಳನ್ನು ಸಂಗ್ರಹಿಸಿ, ನಿರ್ಮಾಣ ಕಾಮಗಾರಿಗಳಿಗೆ ಬಳಸಲು ಯೋಗ್ಯವಿರುವ ಕುರಿತು ವಿಶ್ಲೇಷಣೆಗಾಗಿ ಲೋಕೋಪಯೋಗಿ ಇಲಾಖೆಯ ಗುಣನಿಯಂತ್ರಣ ಪ್ರಯೋಗ ಶಾಲೆ / NABL ಮಾನ್ಯತೆ ಪಡೆದಿರುವ ಪ್ರಯೋಗಶಾಲೆಗಳಿಂದ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಸಿವಿಲ್ ಇಂಜಿನಿಯರಿಂಗ್ ವಿಭಾಗಗಳ ಪ್ರಯೋಗ ಶಾಲೆಗಳಲ್ಲಿ ಪರೀಕ್ಷಿಸಿ ವಿಶ್ಲೇಷಣಾ ವರದಿ ಪಡೆಯುವುದು. ಈ ಸಂಬಂಧ ತಗಲುವ ವೆಚ್ಚವನ್ನು ಪಟ್ಟಾದಾರರೇ ಭರಿಸತಕ್ಕದ್ದು.

9. ಅರ್ಜಿ ಸಲ್ಲಿಸಿದ ಪಟ್ಟಾ ಪ್ರದೇಶದ ಅಂತರ್ಜಲ ಸ್ಥಿತಿಗತಿ ಮತ್ತು ಮರಳು ಗಣಿಗಾರಿಕೆಯ ಪೂರ್ವ ಕಾರ್ಯಸಾಧ್ಯತೆ (Pre-Feasibility) ಬಗ್ಗೆ ಸ್ಪಷ್ಟ ಅಭಿಪ್ರಾಯ ವರದಿಯನ್ನು ಜಿಲ್ಲಾ ಅಂತರ್ಜಲ ನಿರ್ದೇಶನಾಲಯದ ಹಿರಿಯ ಭೂವಿಜ್ಞಾನಿಗಳಿಂದ ಪಟ್ಟಾದಾರರೇ ಪಡೆದು ಸಂಬಂಧಪಟ್ಟ ಉಪನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರಿಗೆ ಸಲ್ಲಿಸುವುದು.

10. ಮರಳು ಗಣಿಗಾರಿಕೆಗೆ ಅನುಮತಿ ಕೋರಿರುವ ಪಟ್ಟಾ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳು ಕಂದಾಯ ಇಲಾಖೆಯ ಸಹಯೋಗದೊಂದಿಗೆ ಜಂಟಿ ಸರ್ವೆ ಕಾರ್ಯ ನಿರ್ವಹಿಸಿ, ಗಡಿ ಗುರುತು ಕಲ್ಲುಗಳನ್ನು ಸ್ಥಾಪಿಸಿ, ಜಂಟಿ ಮೋಜಣಿ ವರದಿ ಪಡೆಯುವುದು.

11. ಜಿಲ್ಲಾ ಮರಳು ಸಮಿತಿಯು ಸಮರ್ಥನೀಯ ಕಾರಣಗಳೊಂದಿಗೆ ಅಪೇಕ್ಷಿತ ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ಸಂಬಂಧ ಪ್ರಸ್ತಾವನೆಯನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶನಾಲಯದ ಮುಖಾಂತರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

12. ಸರ್ಕಾರವು, ಗಣಿ ಮತ್ತು ಭೂವಿಜ್ಞಾನ ನಿರ್ದೇಶನಾಲಯದ ಮೂಲಕ ಜಿಲ್ಲಾ ಮರಳು ಸಮಿತಿಯಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅಗತ್ಯ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ, ಪ್ರಸ್ತಾವನೆಯನ್ನು ಅನುಮೋದಿಸಬಹುದಾಗಿರುತ್ತದೆ.

13. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸಲು ಸರ್ಕಾರದಿಂದ ಅನುಮೋದನೆ ದೊರೆತ ನಂತರ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳು ಅಗತ್ಯ ಶಾಸನಬದ್ಧ ದಾಖಲೆಗಳಾದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್, ಪರಿಸರ ಅನುಮತಿ ಪತ್ರ, ಭೂಪರಿವರ್ತನೆ ಆದೇಶ ಹಾಗೂ ಅವಶ್ಯವೆಂದು ಕಂಡುಬರುವ ಇತರ ದಾಖಲೆಗಳನ್ನು ಪಟ್ಟಾದಾರರು ಸಲ್ಲಿಸತಕ್ಕದ್ದು. ಅಂತೆಯೇ, ಪಟ್ಟಾ ಪ್ರದೇಶವನ್ನು Total Station / Drone / LIDAR ಉಪಕರಣದಿಂದ

ಸರ್ವೆ ನಡೆಸಿ, Reduced Level ನ್ನು ದಾಖಲಿಸಿದ ವರದಿಯನ್ನು ಪಡೆಯುವುದು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಪಟ್ಟಾದಾರರೇ ಭರಿಸಿದ ನಂತರ ನಿಯಮಾನುಸಾರ ಗುತ್ತಿಗೆ ಅಮಲ್ಜಾರಿ (Licence Deed) ಜಾರಿಗೊಳಿಸತಕ್ಕದ್ದು.

14. ಮರಳು ಗಣಿಗಾರಿಕೆ ಪರವಾನಗಿ ಅಮಲ್ಜಾರಿ ಸಮಯದಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ನಿಯಮ 36(5)ರಂತೆ Performance guarantee ಪಡೆಯತಕ್ಕದ್ದು.

15. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ಪಡೆದ ಪರವಾನಗಿದಾರರು ನಿಯಮಗಳನ್ವಯ ರಾಜಧನ, ಕರ್ನಾಟಕ ಉಪಖನಿಜ ನಿಯಮಗಳು, 1994 ರ ನಿಯಮ 36(ಎ) ರಂತೆ ರಾಜಧನದ ಶೇ.10 ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ (DMF) ಗೆ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ರ ನಿಯಮ 31-Z(7) ರನ್ವಯ ಹೆಚ್ಚುವರಿ ನಿಯತಕಾಲಿಕ ಸಂದಾಯದ ಮೊತ್ತ (Additional Periodic Payment) ಪಾವತಿಸತಕ್ಕದ್ದು.

16. ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ನೀಡುವ ಅನುಮತಿಯು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 7 ರಂತೆ ಸಕ್ಷಮ ಪ್ರಾಧಿಕಾರವು ಕಾಲಕಾಲಕ್ಕೆ ವಿಧಿಸುವ ಹೆಚ್ಚುವರಿ ಷರತ್ತು ಹಾಗೂ ನಿಬಂಧನೆಗಳಿಗೆ ಮತ್ತು ಈ ಪ್ರದೇಶದಲ್ಲಿ ಗಣಿಗಾರಿಕೆ ನೀಡುವ ಪರಿಸರ ಅನುಮತಿ ಪತ್ರದಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

## ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆ ನಡೆಸಲು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು

ಪಟ್ಟಾ ಜಮೀನುಗಳಲ್ಲಿ ಮರಳು ಗಣಿಗಾರಿಕೆ ನಡೆಸಲು ಅರ್ಜಿದಾರರು ನಿಗದಿತ ನಮೂನೆ AQL ನಲ್ಲಿ ಅರ್ಜಿ ಶುಲ್ಕ ರೂ. 2000/- (ಪ್ರತಿ ಅರ್ಜಿಗೆ) ಪಾವತಿಸಿ ಈ ಕೆಳಕಂಡ ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಕಛೇರಿಗೆ ಅರ್ಜಿ ಸಲ್ಲಿಸುವುದು.

1. ಅರ್ಜಿದಾರರ ವಾಸಸ್ಥಳದ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್ / ಚುನಾವಣೆ ಗುರುತಿನ ಪತ್ರ ಹಾಗೂ ಇತರೆ ದಾಖಲೆಗಳ ಪ್ರತಿ.
2. ಅರ್ಜಿದಾರರ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 4 ಭಾವಚಿತ್ರಗಳು.
3. ಅರ್ಜಿದಾರರು ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ, ಪಾನ್ ಕಾರ್ಡ್ ಮತ್ತು ಹಿಂದಿನ ಆರ್ಥಿಕ ಸಾಲಿನ ಆದಾಯ ತೆರಿಗೆ ಪಾವತಿಸಿದ ದಾಖಲೆ ಅಥವಾ ಜಿ.ಎಸ್.ಟಿ. ಪಾವತಿದಾರರಾಗಿದ್ದಲ್ಲಿ ನೋಂದಣಿ (Registration Certificate) ಪತ್ರ ಸಲ್ಲಿಸುವುದು.
4. ಅರ್ಜಿದಾರರು ಕಂಪನಿ / ಉದ್ದಿಮೆ / ಸಂಸ್ಥೆ ಆಗಿದ್ದಲ್ಲಿ Indian Companies Act, 1956 ರಡಿ ಅಥವಾ ಇತರೆ ಯಾವುದೇ ಕಾಯ್ದೆಯಡಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ನೋಂದಣಿ ಪತ್ರ ಸಲ್ಲಿಸುವುದು.
5. ಆರ್. ಟಿ. ಸಿ.
6. ಆಕಾರ ಬಂದ್ (ಫಾರಂ-10)
7. ಮ್ಯೂಟೇಶನ್ ಪ್ರತಿ
8. ಆರ್.ಟಿ.ಸಿ. ಯ ಕಾಲಂ 11 ರಲ್ಲಿ ಯಾವುದಾದರೂ ಋಣಭಾರಗಳು ಇದ್ದಲ್ಲಿ, ಸಂಬಂಧಪಟ್ಟ ಸಹಕಾರಿ ಸಂಘ / ಬ್ಯಾಂಕ್ ಗಳಿಂದ ಪಡೆದ ಬೇ ಬಾಕಿ ಪ್ರಮಾಣ ಪತ್ರ ಅಥವಾ ಭೋಜಾ ತೆಗೆದು ಹಾಕಿದ RTC ಪ್ರತಿಗಳನ್ನು ಸಲ್ಲಿಸುವುದು.

9. ಅರ್ಜಿದಾರರು, ಈಗಾಗಲೇ ಖನಿಜ / ಉಪ ಖನಿಜ ಗಣಿ ಗುತ್ತಿಗೆ ಹೊಂದಿದಲ್ಲಿ, ಸರ್ಕಾರಕ್ಕೆ ಪಾವತಿಸಬೇಕಾದ ಬಾಕಿಯ ಕುರಿತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಬೇಬಾಕಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
10. ಒಪ್ಪಿಗೆ ಪ್ರಮಾಣದ ಪತ್ರದ ಅಡಿಯಲ್ಲಿ ಮರಳು ಗಣಿಗಾರಿಕೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಕೆ.ಎಂ.ಎಂ.ಸಿ.ಆರ್, 1994 ರ ನಿಯಮ 32 (8) ರಂತೆ ನಮೂನೆ-CFQ ನಲ್ಲಿ ನೋಟರಿಯೊಂದಿಗೆ ಪಟ್ಟಾದಾರರಿಂದ ಪಡೆದಿರುವ ಒಪ್ಪಿಗೆ ಪತ್ರವನ್ನು ಸಲ್ಲಿಸುವುದು.
11. GPA ಪತ್ರದ ಆಧಾರದ ಮೇರೆಗೆ ಮರಳು ಗಣಿಗಾರಿಕೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದಲ್ಲಿ, ಪಟ್ಟಾದಾರರಿಂದ ಪಡೆದಿರುವ ನೋಂದಾಯಿತ GPA ಪತ್ರವನ್ನು ಸಲ್ಲಿಸುವುದು.
12. ಹಿಸ್ಸಾ / ಪೋಡಿ ನಕ್ಷೆ.
13. ಗ್ರಾಮ ನಕ್ಷೆಯಲ್ಲಿ ಅರ್ಜಿತ ಪ್ರದೇಶವನ್ನು ಗುರುತಿಸಿ ಸಲ್ಲಿಸುವುದು.
14. ಮರಳು ಗಣಿಗುತ್ತಿಗೆ ಕೋರಿರುವ ಅರ್ಜಿತ ಪ್ರದೇಶ (ಪಟ್ಟಾ ಜಮೀನಿನ) ನೀಲಿ ನಕಾಶೆ 1"=660 ಸ್ಕೇಲ್ ನಲ್ಲಿ ಅಕ್ಷಾಂಶ ಮತ್ತು ರೇಖಾಂಶಗಳೊಂದಿಗೆ ಸಮೂದಿಸಿ ಸಲ್ಲಿಸುವುದು.
15. ಅರ್ಜಿತ ಪ್ರದೇಶದ ಗಡಿ ಬಾಂದುಗಳನ್ನು DGPS ಉಪಕರಣದ ಮೂಲಕ ಸರ್ವೇ ನಡೆಸಿ ಗುರುತಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಶಿವಪ್ರಕಾಶ)**
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

CI-MMN-239-2023

Deputy Director (Min. Admn)
Dept. of Mines & Geology
**Bangalore-560001**